ಇಂದು ದಿನಾಂಕಃ 26.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎಸ್ ಬಿ ಎನ್ ವಕೀಲರಿಂದಃ

ಅಪಘಾತದವಾದ ಸಮಯದಲ್ಲಿ ನಾನು ಬಾವಾಪುರ ಗ್ರಾಮದಲ್ಲಿ ಇದ್ದೆ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ಅಪಘಾತವು ಶಿವರಾಜ ಎಂಬ ವ್ಯಕ್ತಿ ತನ್ನ ಮೊಟಾರ ಸೈಕಲ್ ನ್ನು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ಸ್ಕಿಡ್ ಆಗಿ ಬಿದ್ದಿರುತ್ತಾರೆಂದು ನನಗೆ ಚಾಸಾ-7 ರವರು ಕರೆ ಮಾಡಿ ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗರಾಜ ಎಂಬುವವರು ನನ್ನ ಅಣ್ಣ ಎಂದರೆ ಸರಿ. ಅತನಿಗೆ ಕಾಲು ಮುರಿದುಹೋಗಿರುವ ಕಾರಣದಿಂದ ವಿಮಾ ಪರಿಹಾರ ಪಡೆಯುವ ಸಲುವಾಗಿ ಸುಳುಳ ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಅದನ್ನು ಯಾರು ಬರೆದರು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಪೋಲಿಸರು ಹೇಳಿದಂತೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಹೇಳಿದಂತೆ ಯಾವುದೇ ಪಂಚನಾಮೆಯಲ್ಲಿ ಬಾಗೀ ಆಗಿಲ್ಲ ಹಾಗೂ ಪೋಲಿಸರು ನನ್ನ ಸಮಕ್ಷಮದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಸಮಕ್ಷಮದಲ್ಲಿ ಯಾವುದೇ ವಾಹನವನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.